**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ-III, ರಾಯಚೂರು.**
**ಇವರ ನ್ಯಾಯಾಲಯದಲ್ಲಿ.**

**ಸಿ.ಸಿ .ನಂ.:14675/2021**
ಪಿ.ಡಬ್ಲ್ಯೂ :5
ಸಿ.ಡಬ್ಲ್ಯೂ. :13

| | |
|---|---|
| ಸಾಕ್ಷಿದಾರರ ಹೆಸರು | : ಶ್ರೀಮತಿ ನಾಗರತ್ನ ಗಂಡ ಬಸವರಾಜ |
| ವಯಸ್ಸು | : 41 ವರ್ಷ |
| ಉದ್ಯೋಗ | : ಪಿ.ಐ ಬೆಂಗಳೂರು |
| ವಾಸ ಸ್ಥಳ | : ಬೆಂಗಳೂರು |

(ಈ ದಿವಸ ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು ಸನ್ 2017 ರಿಂದ 2018 ರವರೆಗೆ ನೇತಾಜಿನರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ಈ ಪ್ರಕರಣದಲ್ಲಿ ದಿನಾಂಕಃ 25-10-2017 ರಂದು ಮಧ್ಯಾಹ್ನಃ 1.40 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿ ಇದ್ದಾಗ ಅಂಚೆ ಮೂಲಕ ಒಂದು ಗಣಕೀಕೃತ ಫಿರ್ಯಾದಿ ಬಂದಿದ್ದು, ಸದರಿ ನೊಂದಾಯಿತ ಅಂಚೆಯ ಫಿರ್ಯಾದನ್ನು ಪಡೆದು, ಸದರಿ ದೂರಿನ ಆಧಾರದ ಮೇಲೆ ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ನಿ.ಪಿ.1 ರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ.1 ರ ಆಧಾರದ ಮೇಲೆ ನಮ್ಮ ಠಾಣ ಗುನ್ನ ಸಂಖ್ಯೆ 138/2017 ರಂತೆ ಪ್ರಕರಣ ದಾಖಲಿಸಿ, ಮೂಲ ದೂರು ಹಾಗೂ ಎಫ್.ಐ.ಆರ್ ಪ್ರತಿಯನ್ನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ಮತ್ತು ಮೂಲ ದೂರನ್ನು ನಿ.ಪಿ.6 ಎಂದು, ನಿ.ಪಿ.6 ರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ತಿಳಿಸಿರುವ ವಿಷಯಗಳು ಜಾತಿನಿಂದನೆಗೆ ಸಂಬಂಧಿಸಿದ ಪ್ರಕರಣವಾಗಿದ್ದರಿಂದ, ಸದರಿ ಕಡತವನ್ನು ಮಾನ್ಯ ಜಿಲ್ಲಾ ಪೋಲಿಸ್ ವರಿಷ್ಟರ ಆದೇಶದ ಮೇರೆಗೆ ಡಿ.ವೈ.ಎಸ್.ಪಿ ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 15 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎಮ್.ಎನ್ ಆರೋಪಿಗಳ ಪರ ವಕೀಲರಿಂದಃ**

1. ನಿ.ಪಿ.1 ರ ಫಿರ್ಯಾದು ನೊಂದಾಯಿದ ಅಂಚೆ ಮೂಲಕ ಬಂದಿದೆ ಎಂದು ತೋರಿಸಲು, ಸದರಿ ಅಂಚೆಯ ಲಕೋಟೆಯನ್ನು/ಕವರ್ ನಾನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿ. ಸದರಿ ಅಂಚೆ ಲಕೋಟೆ ನಮ್ಮ ಠಾಣೆಯಲ್ಲಿ ಇರಬಹುದು, ತಮಗೆ ನೆನಪಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 01-07-2017 ರಿಂದ 26-12-2017 ರವರೆಗೆ ನೇತಾಜಿನಗರ ಪೋಲಿಸ್ ಠಾಣೆಯಲ್ಲಿ ನೊಂದಾಯಿತ ಅಂಚೆಯ ಮೂಲಕ ಯಾವುದೇ ಲಿಖಿತ ದೂರುಗಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 03-12-2022 ರಂದು ಆರೋಪಿತರು ಶ್ರೀನಿವಾಸ ಎಂಬುವವರು ಮೂಲಕ ನಮ್ಮ ಠಾಣೆಗೆ ದಿನಾಂಕಃ 01-07-2017 ರಿಂದ 26-12-2017 ರವರೆಗೆ ನೊಂದಾಯಿತ ಅಂಚೆಯ ಮೂಲಕ ಯಾವುದಾದರು ಲಿಖಿತ ದೂರುಗಳು ಬಂದಿರುತ್ತವೆಯೇ ಎಂದು ಮಾಹಿತಿ ಕೇಳಿ ಅರ್ಜಿಯನ್ನು ಕೊಟ್ಟಿರುವುದಕ್ಕೆ ಸಂಬಂಧಪಟ್ಟಂತೆ ನಮ್ಮ ಠಾಣೆಯವರು ನೊಂದಾಯಿತ ಅಂಚೆಯ ಮೂಲಕ ಯಾವುದೇ ಲಿಖಿತ ದೂರುಗಳು ಬಂದಿರುವುದಿಲ್ಲ ಎಂದು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ, ಸಾಕ್ಷಿಯು ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ನೊಂದಾಯಿತ ಅಂಚೆಯ ಮೂಲಕ ನಿ.ಪಿ.1 ರ ದೂರನ್ನು ಸ್ವೀಕಾರ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ನಮ್ಮ ಠಾಣಾ ಡೈರಿಯಲ್ಲಿ ಉಲ್ಲೇಖ ಮಾಡಿರುತ್ತೇನೆ ಎಂದರೆ ಸರಿ. ಸದರಿ ಠಾಣಾ ಡೈರಿಯನ್ನು ಹಾಜರು ಪಡಿಸಲು ನಮಗೆ ತಕರಾರು ಇರವುದಿಲ್ಲ ಎಂದರೆ, ಸಾಕ್ಷಿಯು ಠಾಣಾ ಡೈರಿಯನ್ನು ಹಾಜರು ಪಡಿಸಲು ಸಾಧ್ಯವಿಲ್ಲ ಏಕೆಂದರೆ, ತನಿಖಾ ಕಾಲಕ್ಕೆ ಠಾಣಾ ಡೈರಿಯ ಅವಶ್ಯಕತೆ ಇರುವುದರಿಂದ ಮತ್ತು ಠಾಣಾ ದಿನಚರಿಯ ಭಾಗವಾಗಿರುವುದರಿಂದ ಹಾಜರು ಪಡಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.

2. ಸದರಿ ನಿ.ಪಿ.1 ರ ದೂರನ್ನು ಮಾನ್ಯ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ, ಡಿ.ವೈ.ಎಸ್.ಪಿ ರವರಿಗೆ, ವೃತ್ತ ನಿರೀಕ್ಷಕರಿಗೂ ಸಹ ಸದರಿ ಫಿರ್ಯಾದಿನ ಪ್ರತಿಯನ್ನು ಕಳುಹಿಸಲಾಗಿದ್ದು, ಸದರಿ ಅಧಿಕಾರಿಗಳಿಂದ ತಮಗೆ ಏನಾದರು ನಿರ್ದೇಶನಗಳು ಬಂದಿರುತ್ತವೆಯೇ ಎಂದರೆ, ಸಾಕ್ಷಿಯು ತಮಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಿ.ಪಿ.1 ರ ಫಿರ್ಯಾದನ್ನು ಸ್ವೀಕಾರ ಮಾಡಿದ ನಂತರ ನಾನು ಫಿರ್ಯಾದಿ/ಚಾಸಾ 1 ರವರನ್ನು ಕರೆಯಿಸಿ ವಿಚಾರಣೆ ಮಾಡಿ ದೂರನ್ನು ದಾಖಲಿಸಿರುತ್ತೇನೆ. ನಿ.ಪಿ.1 ರ ಫಿರ್ಯಾದು ಬೆರಳಚ್ಚು ಮಾಡಲಾಗಿದೆ ಎಂದರೆ ಸರಿ. ನಿ.ಪಿ.1 ರ ಫಿರ್ಯಾದಿನಲ್ಲಿ ಆರೋಪಿತರ ರವರ ವಿಳಾಸವನ್ನು ಕೈ ಬರಹದಲ್ಲಿ ಗಾಜಗಾರಪೇಟೆ ರಾಯಚೂರು ಎಂದು ಬರೆಯಲಾಗಿದೆ ಎಂದರೆ

ಸರಿ.  ಸದರಿ ಕೈ ಬರಹದಲ್ಲಿ ಆರೋಪಿತರ ವಿಳಾಸವನ್ನು ಬರೆದವರು ಯಾರು ಎಂದು ನಾನು ನಿ.ಪಿ.1 ರ ಫಿರ್ಯಾದನ್ನು ದಾಖಲಿಸುವ ಕಾಲಕ್ಕೆ ವಿಚಾರಣೆ ಮಾಡಿಲ್ಲ ಎಂದರೆ ಸರಿ.  ನಿ.ಪಿ.1 ರ ಫಿರ್ಯಾದಿನಲ್ಲಿ ನಾನು ಚಾಸಾ 1 ರವರನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿ ನಿ.ಪಿ.1 ಮತ್ತು 6 ರ ಫಿರ್ಯಾದು ಮತ್ತು ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ ಎಂದು ನಿಖರವಾಗಿ ಉಲ್ಲೇಖ ಮಾಡಿಲ್ಲ ಎಂದರೆ ಸರಿ.

3.  ದಿನಾಂಕಃ 25-10-2017 ರಂದು ನಮ್ಮ ಠಾಣೆಗೆ ನೊಂದಾಯಿತ ಅಂಚೆ ಮೂಲಕ ಯಾವುದೇ ದೂರು ಬಂದಿಲ್ಲ ಎಂದರೆ ಸರಿಯಲ್ಲ.  ಬೇರೆಯವರು ಆರೋಪಿಗೆ ಆಗದವರು ತಂದು ಕೊಟ್ಟಂತಹ ಸುಳ್ಳು ದೂರನ್ನು ನಾನು ನಮ್ಮ ಠಾಣಾ ಅಂಕಿ ಅಂಶಗಳಿಗೊಸ್ಕರ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.  ನಾನು ಚಾಸಾ 1 ರವರನ್ನು ಠಾಣೆಗೆ ಕರೆಯಿಸಿರುವುದಿಲ್ಲ, ಯಾವುದೇ ವಿಚಾರಣೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.  ನಿ.ಪಿ.1 ಮತ್ತು 6 ರಲ್ಲಿನ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.  ನಾನು ಚಾಸಾ 15  ರವರಿಗೆ ಯಾವುದೇ ಕಡತವನ್ನು ತನಿಖೆಗಾಗಿ ಮಾನ್ಯ ಪೋಲಿಸ್ ವರಿಷ್ಠಾಧಿಕಾರಿಗಳ ಆದೇಶದಂತೆ ವಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.  ಮಾನ್ಯ ವರಿಷ್ಠಾಧಿಕಾರಿಗಳು ಯಾವುದೇ ಆದೇಶವನ್ನು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪು ಮಾಡದೇ ಇದ್ದರು ಸಹ ಮೇಲಾಧಿಕಾರಿಗಳ ಮಾತು ಕೇಳಿ  ಸುಳ್ಳು ಪ್ರ.ವ.ವರದಿಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಸಹಿ/-
1–ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು **ಹಾಗೂ 3 ನೇ ಪ್ರ.ದ.ನ್ಯಾ.ದ.,**
**ರಾಯಚೂರು**